ಕುಮಾರವ್ಯಾಸನ ಕಾಲ 15ನೇ ಶತಮಾನ ಈತನ ಕೃತಿ ಕರ್ನಾಟ ಭಾರತ ಕಥಾಮಂಜರಿ ಈತನ ಆರಾಧ್ಯದೈವ ಗದುಗಿನ ವೀರನಾರಾಯಣ. ಪ್ರಸ್ತುತ ಪಠ್ಯ ಭಾಗವನ್ನು ಸಭಾಪರ್ವದ ೧೩ನೇ ಸಂಧಿಯಿಂದ ಆಯ್ದುಕೊಳ್ಳಲಾಗಿದೆ

ಧೃತರಾಷ್ಟ್ರ ಕರೆದ ಸಭೆಗೆ ಹೋಗಕೂಡದು ಎಂದು ನುಡಿಯುವ ಪಂಡಿತರು ಮೌಹೂರ್ತಕರ ಮಾತನ್ನು ಕಡೆಗಣಿಸಿ ಧರ್ಮರಾಯನು ಈ ಶಕುನ ಪಂಡಿತರು ನರಿ ಮೊಲ ಹಕ್ಕಿ, ಜಿಂಕೆಯ ಮೂಲಕ ಶಕುನ ನುಡಿಯುವ ಇವರು ಏನು ತಾನೆ ಮಾಡುತ್ತಾರೆ ಎಂದು ಅವರ ಮಾತನ್ನು ತಿರಸ್ಕರಿಸಿ ಧರ್ಮರಾಯನು ಧೃತರಾಷ್ಟ್ರನ ಔತಣವನ್ನು ಸ್ವೀಕರಿಸುತ್ತಾನೆ. ಆಗ ಇದು ದೈವವೇ ಒಡ್ಡಿದ ನೇಣು. ಹಾಗಾಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುತ್ತಾನೆ ಕುಮಾರವ್ಯಾಸ.

ಹೀಗೆ ಭಾವಿಸಿ ಹೊರಟ ಧರ್ಮರಾಯನು ಹಸ್ತಿನಾ ವತಿಗೆ ಆನೆಯ ಮೇಲೆ ಬಂದು ಹಿಡಿದನು ಅಲ್ಲಿ ದೃತರಾಷ್ಟ್ರ ರಾಜನಿಗೆ ರತ್ನ ವಜ್ರಗಳ ಸಮೂಹದ ಕಾಣಿಕೆಯನ್ನು ಆತನ ಮುಂದೆ ನೀಡಿದರು ಮತ್ತು ದೃತರಾಷ್ಟ್ರನ ಕಾಲಿಗೆ ಎರಗಿ ನಮಸ್ಕರಿಸಿದರು ಆಗ ಧೃತರಾಷ್ಟ್ರನು ಕುಲ ತಿಲಕನಾದ ಧರ್ಮರಾಯನೇ ಬಾ ಮಾವಿನ ಮರದಲ್ಲಿ ಕೋಗಿಲೆಯಂತಿರುವ ಧರ್ಮರಾಯನೇ ಬಾ ಧರ್ಮವೇ ಮೈವೆತ್ತ ಲತಾವಳಿಯೇ ಬಾ ಎಂದು ಆ ರಾಜನನ್ನು ಆಲಂಗಿಸಿದನು

ಮತ್ತು ಮನ್ಮಥ ಸದೃಶ ಭೀಮ ಬಾ, ರಣದಲ್ಲಿ ನಿಸ್ಸೀಮನಾದ ಅರ್ಜುನನೇ ಬಾ, ನಕುಲ ಸಹದೇವ ಬಾ ಎಂದು ವಿವಿಧ ಪ್ರೇಮರಸದಲ್ಲಿ ಉದ್ದಾಮ ಭುಜನಾದ ಧತರಾಷ್ಟ್ರ ಅವರನ್ನು ಆಲಂಗಿಸಿದನು ಆಗ ಆತನ ಮನದಲ್ಲಿದ್ದಂತಹ ಕಹಿಯ ಬೀಜ ಹರ್ಷದ ಮಳೆಯಲಿ ಮುಸುಕಿ ಹೋಯಿತು.

ದುಷ್ಟರ ಮನದಲ್ಲಿರುವ ಕಾಳಕೋಟದ ವಿಷ ಪಾಂಡವರಿಗೆ ತಿಳಿಯಲಿಲ್ಲ ಅವರ ಲಲಿತ ಮಧುರ ವಚನ ವಿಳಾಸಗಳಿಗೆ ಮರುಳಾದರು ಅದು ಹೇಗಿತೆಂದರೆ ಜಾಲಿ ಮರದ ಬನದಲ್ಲಿ ಮಧುವನ್ನು ಹೀರಲು ಬಂದ ಮರಿದುಂಬಿಯಂತೆ ಆ ಪಾಂಡವ ರಾಜರುಗಳು ದುಷ್ಟರು ರಚಿಸಿದ ಬಲೆಯಲ್ಲಿ ಸಿಲುಕಿದರು

ವೈಶಂಪಾಯನ ಮುನಿಗಳು ಜನಮೇಜಯರಾಜನಿಗೆ ಧರಣಿ ಪತಿ ಕೇಳು, ಆ ವಿಸ್ತಾರವಾದ ಮಹಾಸಭೆಯ ವೈಭವವು ಅದು ಹೇಗ ಇತ್ತೆಂದರೆ ಆ ವಿಸ್ತಾರವಾದ ಮಹಾ ಸಭೆಯಲ್ಲಿ ಸ್ವಲ್ಪವೂ ಸ್ಥಳವನ್ನು ಕಾಣಲಾಗುತ್ತಿರಲಿಲ್ಲ ತುಂಬಿದ ಸಭೆಯಲ್ಲಿ ರಾಜರು ಇದ್ದರೆ ಹೊರಗೆ ರಥವನ್ನು ನಡೆಸುವ ರಥಿಕರು ಮತ್ತು ಕುದುರೆ ಸವಾರಿಗಳು ಹಾಗೂ ಸೈನಿಕರು ಪದಾತಿಗಳು ಇದ್ದು ಆ ಮಹಾಸಭೆಯ ವೈಭವ ಇಂದ್ರನ ಸಭೆಯ ಐದು ಪಟ್ಟು 10 ಪಟ್ಟು ಹೆಚ್ಚಾಗಿತ್ತು ಎಂದ.

ಅಲ್ಲಿ ಒಂದು ಕಡೆ ಜೂಜನ್ನು ಆಡುವ ಕವಡೆಯನ್ನು ಹೊಂದಿರುವ ಜನಸಮೂಹ , ಮತ್ತೊಂದು ಕಡೆಯಲ್ಲಿ ಗದ್ಯಾಪದ್ಯಗಳನ್ನು ವಾಚಿಸುವವರು ಮತ್ತೊಂದು ಕಡೆಯಲ್ಲಿ ವಾರ ವಧುಗಳ ಸಂಗೀತ ಗೋಷ್ಠಿಯು ಮತ್ತೊಂದು ಕಡೆಯಲ್ಲಿ ತರ್ಕ ಮಾಡುವ ಜನರ ಗೋಷ್ಠಿ ಮಗದೊಂದು ಕಡೆಯಲ್ಲಿ ಕುರುಕುಲದ ರಾಜನಾದ ದುರ್ಯೋಧನನ ಎದುರಿಗೆ ಪಗಡೆಯನ್ನು ಹಾಸಿರುವ ಸಂದರ್ಭ ಅಲ್ಲಿ ಕಂಡಿತು.

ಆಗ ಶಕುನಿಯೂ ಧರ್ಮರಾಯನನ್ನು ಉದ್ದೇಶಿಸಿ ಪಗಡೆ ಆಡಲು ಗೊತ್ತಿರುವಂತಹ ಧರ್ಮರಾಯನಿಗೆ ಬರಲು ತಿಳಿಸು ಇಲ್ಲವೇ ನಾವು ಜೂಜನ್ನು ಆಡುತ್ತಿರಲು ಆತ ಅದನ್ನು ನೋಡುತ್ತಿರಲಿ ಎಂದು ರಾಜನಾದವನು ನೆತ್ತವನ್ನು ಆಡಲು ಅಸಾಧ್ಯವಾದರೆ ಆತ ಜಿಂಕೆಯೇ ಸರಿ ಎಂದು ದುರುಳತನವನ್ನು ಹೊಂದಿದ ಶಕುನಿ ಈ ರೀತಿಯಲ್ಲಿ ಮಾತನಾಡಿದನು

ಇನ್ನು ಹೆಚ್ಚಿನ ಮಾತೇನು ಧರ್ಮರಾಯನು ಶಕುನಿ ಒಡ್ಡಿದ ಈ ಬಲೆಯಲ್ಲಿ ಸಿಲುಕಿಕೊಂಡನು ಆತ ನೆತ್ತವನ್ನು ಆಡುವ ಆ ಗದ್ದುಗೆಯ ಬಳಿ ಬಂದನು ಹೀಗೆ ನೋಡಲು ಬಂದ ಧರ್ಮ ರಾಯನು ತದನಂತರದಲ್ಲಿ ನೆತ್ತವನ್ನು ಆಡಲು ಶುರು ಮಾಡಿದನು ಆತನ ಪಕ್ಕದಲ್ಲಿ

ಪಂಚ ಪಾಂಡವರು ಅಂದರೆ ತಮ್ಮಂದಿರು ಎಡದ ಕಡೆಯಲ್ಲಿ ಸಿಂಹಾಸನದಲ್ಲಿ ಅಲಂಕೃತನಾದ ದೃತರಾಷ್ಟ್ರ ಎದುರುಗಡೆಯಲ್ಲಿ ದುರ್ಯೋಧನ ಕರ್ಣ ಶಕುನಿ ದುಶ್ಯಲೆಯ ಪತಿಯಾದ ಜಯದ್ರತ ಮುಂತಾದವರು ಕುಳಿತರು

ಶಕುನಿ ಮುಂದುವರಿದು ಯುದ್ಧಕ್ಕೆ ಜೂಜಿಗೆ ಕರೆದಾಗ ಹಿಂಜರಿದರೆ ಬಳಿಕ ಆತ ಕ್ಷತ್ರಿಯರಲ್ಲಿ ಗರ್ವತನವನ್ನು ಹೊಂದಲು ಸಾಧ್ಯವಿಲ್ಲ ಇದು ರಾಜಧರ್ಮ ನಿನಗೆ ಗೊತ್ತಿಲ್ಲವೇ ಎಂದು ಧರ್ಮರಾಯನನ್ನು ಪ್ರಶ್ನಿಸಿದನು. ನಾವು ಜೂಜಿಗೆ ಕರೆದಿದ್ದೇವೆ ಬೇಕಾದರೆ ನೀನು ಬಾ ಇಲ್ಲದೆ ಹೋದರೆ ರಾಜ ಧರ್ಮವನ್ನು ತಿರಸ್ಕರಿಸುವುದಾದರೆ ಆಟಕ್ಕೆ ಬರಬೇಡ ಎಂದು ಉಪೇಕ್ಷಿಸಿ  ನುಡಿದನು

ಈ ಮಾತುಗಳನ್ನು ಕೇಳಿಸಿಕೊಂಡ ಧರ್ಮರಾಯನು ಆ ಕ್ಷಣದಲ್ಲಿಯೇ ದ್ಯೂತವನ್ನು ಆಡಲು ಹೋದನು. ಮೊದಲು ಸಾಮಂತರಾಜರನ್ನು ಆ ಒಂದು ಪಂದ್ಯಕ್ಕೆ ಪಣವನ್ನು ಒಡ್ಡಿದನು. ತದನಂತರ 10000 ಕುದುರೆಗಳನ್ನು ಪಣ ಒಡ್ಡಿದನು ಆಗ ಮುಂದಿನ ಆಟವನ್ನು ಆಡುವುದಾದರೆ ಯಾವುದು ಪಣ ಮಾತಾಡಿ ಎಂದು ಶಕುನಿ ಕೇಳಿದಾಗ ಧರ್ಮರಾಯನು ಮುಂದೆ ಒಡ್ಡುವ ಪಣವನ್ನು ಕುರಿತು ಮನದಲ್ಲಿ ಯೋಚಿಸಿದ.

ಆಗ ಧರ್ಮರಾಯನು ನನ್ನ ಬಳಿಯಲ್ಲಿ ಅಗಣಿತ ಸಂಪತ್ತು ಇದೆ ಈಗಲೇ ಪಗಡೆ ಹಾಸನ್ನು ಹಾಸು ಸೋತಂತಹ ವಸ್ತುಗಳನ್ನು ಈ ಆಟದಲ್ಲೇ ಗೆಲ್ಲುವೆ ನೋಡು ನನ್ನ ಕೌಶಲವ ಎಂದು ಶಕುನಿಗೆ ಹೇಳಿದನು ಆ ಪಗಡೆಯಾ ಆಟಕ್ಕೆ ಆನೆ ಕುದುರೆ ರಥಸಹಿತ ಸಕಲ ಸೈನ್ಯವನ್ನು ಒಡ್ಡಿದನು ಧರ್ಮರಾಯ

ಧರ್ಮರಾಯನ ಮಾತಿನಂತೆ ಪಣವನ್ನು ಒಡ್ಡಿದ ಶಕುನಿ ದುರ್ಯೋಧನನಿಗೆ ಯಾರ ಸಹಾಯವೂ ಇಲ್ಲ ನಿನಗಾದರೆ ಕೃಷ್ಣಾದಿಗಳು ಸಹಾಯವನ್ನು ಮಾಡುವರು ನಮಗಾದರೆ ದಾಯ ಕಣ್ಣು ತೆರೆದರೆ ಮಾತ್ರ ಸಿಯೋಧನನಿಗೆ ಗೆಲುವು ಅಯ್ಯೋ ದಾಯವೇ ಬಾಯೆಂದೂ ಆ ಶಕುನಿಯೂ ದಾಯವನ್ನು ಉರುಳಿಸಿದನು

ಮತ್ತೆ ಹೇಳುವುದಕ್ಕೆನಿದೆ ಪ್ರತಿ ನನಗೂ ಸೋಲುತ್ತಾ ಸೋಲನ್ನೇ ಬಿತ್ತಿ ಬೆಳೆದನು ಧರ್ಮರಾಯ ಕೌರವರಿಗೆ ತನ್ನ ಸಕಲ ಸೈನ್ಯ ಸರ್ವಸ್ವಧನವನ್ನು ತೆತ್ತನು ಮತ್ತೆ ಪಣವ ಏನೆಂದು ಕೇಳಿದಾಗ 60,000 ಆನೆಯ ಮರಿ 80000 ಕುದುರೆಯ ಮರಿಗಳನ್ನು ಪಣವಾಗಿ ಹುಟ್ಟಿದನು ಧರ್ಮರಾಯ

ಹೀಗೆ ಪಣವನ್ನು ಒಡ್ಡುತ್ತಾ ಒಡ್ಡುತ್ತಾ ಇಂದ್ರಪ್ರಸ್ಥದ ಸಮಸ್ತ ಅರಮನೆಯ ಭಂಡಾರವನ್ನು ಜೊತೆಗೆ ವಾರಸ್ತ್ರೀಯರ ಬಂಗಾರವನ್ನು ಕೋಟಿ ಸಂಖ್ಯೆಯಲ್ಲಿ ಕುರುಪತಿಗೆ ಪಣವಾಗಿಟ್ಟು ಧರ್ಮರಾಯ ಸೋತನು ತದನಂತರ ಅಂತಪುರ ರಾಣಿಯರ ವಿವಿಧ ಆಭರಣಗಳನ್ನು ಕೊಟ್ಟು ಪಣದಲ್ಲಿ ತನ್ನ ತಿಳಿಗೇಡಿತನದಿಂದ ಧರ್ಮರಾಯ ಎಲ್ಲವನ್ನು ಸೋತನು.

ನಕುಲ ಸಹದೇವ ಅರ್ಜುನರ ಕಿರೀಟ ಕಿವಿಯ ಆಭರಣ ಪದಕ ಮುಂತಾದ ಸಮಸ್ತ ಆಭರಣವನ್ನು ಹೊಂದಿ ಮತ್ತೊಂದು ಪಗಡೆಯ ಆಟದಲ್ಲಿ ಸೋತನು ಹೀಗೆ ಸಾಧು ಜನ ಸೇವಕನಾದ ಧರ್ಮರಾಯನು ವಿಧಿಯು ಸಿಟ್ಟಾದಾಗ  ವಿಷಮ ಕರ್ಮದ ಮಾಯೆಯ ಬಲೆಯಲ್ಲಿ ಎಲ್ಲವನ್ನು ಸೋತನು

ಹೀಗೆ ಶಕುನಿ ರಚಿಸಿದ ಬಲೆಯ ಕುಣಿಕೆಯಲ್ಲಿ ನಿಮಿಷ ಮಾತ್ರದಲ್ಲಿ ಧರ್ಮರಾಯನು ಬಿದ್ದನು ಹೀಗೆ ತನ್ನ ತಮ್ಮಂದಿರನ್ನು ಸೋತ ಬಳಿಕ ಜನಸಮೋಹವು ಆಶ್ಚರ್ಯ ಚಕಿತರಾಗಿ ಇರಲು ಶಕುನಿಯೂ ಒಡೆಯ ಮುಂದಿನ ಪಣವೇನೆಂದು ಪ್ರಶ್ನಿಸಿದನು

ಸೋಬಲ ಅಂದರೆ ಶಕುನಿ ಇದೊಂದೇಪಣ ಸಾಕು ಈ ಪಣದಲ್ಲಿ ಸರ್ವಸ್ವವನ್ನು ಕಳೆದ ಸಂಪತ್ತನ್ನು ದ್ರೌಪದಿಯ ಮೂಲಕ ಗೆಲ್ಲುವೆನು ಆಕೆಯನ್ನು ಉಳಿದ ಧನ ಸಂಪತ್ತು ನಮ್ಮೈವರಿಗೂ ನಿಷ್ಫಲವಾದುದು ಎನ್ನಲು ಶಕುನಿಯೂ ಹರ್ಷದಲ್ಲಿ ಮತ್ತೊಂದು ದಾಯದ ಆಟಕ್ಕೆ ಸಿದ್ಧಪಡಿಸಿದನು.

ಶಕುನಿಗೂ ಗೆಲುವು ನಮ್ಮದು ನೀವು ಮೊದಲು ನಿಮ್ಮ ಒಡಹುಟ್ಟಿದವರನ್ನು ಸೋತಿರಿ, ಬಳಿಕ ದ್ರೌಪದಿಯನ್ನು ಸೋತಿರಿ ನಿಮ್ಮ ಇಷ್ಟದ ಪಣವನ್ನು ಹೊಡ್ಡು ಅದನ್ನು ವಿರೋಧಿಸುವ ನ್ಯಾಯವರ್ತಿಗಳು ನಾವಲ್ಲ ಎಂದು ಈ ತಪ್ಪಿಗೆ ಧರ್ಮರಾಯನ್ನೇ ಹೊಣೆಯನ್ನು ಮಾಡಿ ಕೈಮುಗಿದನು ಶಕುನಿ.

ಧರ್ಮರಾಯನ ಸಕಲ ಚತುರಂಗ ಸೇನೆಯನ್ನು ಮತ್ತು ಭಂಡಾರ ಸಹಿತ ದ್ರೌಪದಿ ಪಾಂಡವರ ಸಮೇತವಾಗಿ ಸಕಲ ರಾಜ್ಯದ ಸಿರಿ ಸಂಪತ್ತನ್ನು ನಿನಗೆ ಗೆದ್ದು ಕೊಟ್ಟಿದ್ದೇನೆ ಕೊಟ್ಟ ಭಾಷೆಗೆ ಕಳಸವಿಟ್ಟಂತೆ ನಡೆದುಕೊಂಡಿದ್ದೇನೆ ಎಂದು ಸುಯೋಧನನಿಗೆ ಕೈ ಮತ್ತು ಕಣ್ ಸನ್ನೆಗಳ ಮುಖೇನ ಶಕುನಿ ಸಂಕೇತ ಮಾಡಿದನು.

ಭುವನೇಶ್ವರಿ. ಜಿ

ಕನ್ನಡ ವಿಭಾಗ